**ಕರ್ನಾಟಕ ವಿಧಾನಸಭೆ**
**ಹದಿನಾರನೇ ವಿಧಾನಸಭೆ**
**ಮೂರನೇ ಅಧಿವೇಶನ**

# ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ವಿಧೇಯಕ, 2024

**(2024ರ ವಿಧಾನಸಭೆಯ ವಿಧೇಯಕ ಸಂಖ್ಯೆ–11)**

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997ನ್ನು (2001ರ ಕರ್ನಾಟಕ ಅಧಿನಿಯಮ 33) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ,-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ, 2024 ಎಂದು ಕರೆಯತಕ್ಕದ್ದು.

(2) ಇದು, ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 17ನೇ ಪ್ರಕರಣದ ತಿದ್ದುಪಡಿ.- ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997 (2001ರ ಕರ್ನಾಟಕ ಅಧಿನಿಯಮ 33) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ)ರ 17ನೇ ಪ್ರಕರಣದ (ಎ) ಖಂಡದಲ್ಲಿ,-

(i) (1)ನೇ ಉಪಖಂಡ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳಿಗಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ಯಾವ ಸಂಸ್ಥೆಗಳ ಒಟ್ಟು ವಾರ್ಷಿಕ ಆದಾಯವು ಒಂದು ಕೋಟಿ ರೂಪಾಯಿಗಳನ್ನು ಮೀರುವುದೋ ಆ ಸಂಸ್ಥೆಗಳ ಸಂಬಂಧಪಟ್ಟ ನಿವ್ವಳ ಆದಾಯದ ಶೇಕಡಾ ಹತ್ತರಷ್ಟು;"

(ii) (2)ನೇ ಉಪಖಂಡ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳಿಗಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) ಯಾವ ಸಂಸ್ಥೆಗಳ ಒಟ್ಟು ವಾರ್ಷಿಕ ಆದಾಯವು ಹತ್ತು ಲಕ್ಷ ರೂಪಾಯಿಗಳನ್ನು ಮೀರಿದ್ದು, ಆದರೆ ಒಂದು ಕೋಟಿ ರೂಪಾಯಿಗಳನ್ನು ಮೀರಿರುವುದಿಲ್ಲವೋ ಆ ಸಂಸ್ಥೆಗಳಿಗೆ ಸಂಬಂಧಪಟ್ಟ ನಿವ್ವಳ ಆದಾಯದ ಶೇಕಡಾ ಐದರಷ್ಟು."

**3. 19ನೇ ಪ್ರಕರಣದ ತಿದ್ದುಪಡಿ**.- ಮೂಲ ಅಧಿನಿಯಮದ 19ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎ) ಕಡಿಮೆ ಆದಾಯದ ಅಥವಾ ಅಗತ್ಯ ಸನ್ನಿವೇಶಗಳಲ್ಲಿ ಪ್ರವರ್ಗ-ಸಿ ರಡಿ ಅಧಿಸೂಚಿಸಲಾದ ಧಾರ್ಮಿಕ ಸಂಸ್ಥೆಗೆ ಸಹಾಯ ಧನ ನೀಡಿಕೆ;"

**4. 25ನೇ ಪ್ರಕರಣದ ತಿದ್ದುಪಡಿ**.- ಮೂಲ ಅಧಿನಿಯಮದ 25ನೇ ಪ್ರಕರಣದಲ್ಲಿನ (1)ನೇ ಉಪಪ್ರಕರಣದ ಖಂಡ (iv)ರ ಮೂರನೇ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಅಲ್ಲದೆ ಪರಂತು ಉಳಿದ ನಾಲ್ವರು ಸಾಮಾನ್ಯ ಸದಸ್ಯರಲ್ಲಿ ಒಬ್ಬರು ವಿಶ್ವಕರ್ಮ ಹಿಂದೂ ದೇವಾಲಯ ವಾಸ್ತುಶಿಲ್ಪ ಮತ್ತು ಶಿಲ್ಪಶಾಸ್ತ್ರದಲ್ಲಿ ಕೌಶಲ್ಯವುಳ್ಳವರಾಗಿರತಕ್ಕದ್ದು."

**5. 26ನೇ ಪ್ರಕರಣದ ತಿದ್ದುಪಡಿ**.- ಮೂಲ ಅಧಿನಿಯಮದ 26ನೇ ಪ್ರಕರಣದ (2)ನೇ ಉಪಪ್ರಕರಣದ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) ರಾಜ್ಯ ಧಾರ್ಮಿಕ ಪರಿಷತ್ತು ಆಡಳಿತ ಸಮಿತಿಯ ಅಧ್ಯಕ್ಷರನ್ನು ನೇಮಿಸುವ ಅಧಿಕಾರ ಹೊಂದಿರತಕ್ಕದ್ದು."

**6. ಹೊಸ ಪ್ರಕರಣ 69ಇ ಸೇರ್ಪಡೆ**.- ಮೂಲ ಅಧಿನಿಯಮದ 69ಡಿ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"69ಇ.- ಜಿಲ್ಲಾ ಮಟ್ಟದ ಮತ್ತು ರಾಜ್ಯ ಉನ್ನತ ಮಟ್ಟದ ಸಮಿತಿಯ ರಚನೆ.- (1) ರಾಜ್ಯ ಸರ್ಕಾರವು, ಗ್ರೂಪ್-ಎ ದೇವಸ್ಥಾನಗಳ ಕ್ಷೇತ್ರ ವ್ಯಾಪ್ತಿಯೊಳಗೆ ಯಾತ್ರಾರ್ಥಿಗಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಹಾಗೂ ಅವರಿಗೆ ಸುರಕ್ಷತೆಯನ್ನು ಕಲ್ಪಿಸಲು ಕಟ್ಟಡಗಳ, ರಸ್ತೆಗಳ, ಕಾಲುವೆಗಳ ನಿರ್ಮಾಣ ಮತ್ತು ನಿರ್ವಹಣೆಗೆ ಸಂಬಂಧಿಸಿದಂ , ವಿದ್ಯುಚ್ಛಕ್ತಿ ಸರಬರಾಜು ಮತ್ತು ನಿರ್ವಹಣೆ, ನೀರು ಸರಬರಾಜು ಮತ್ತು ನೈರ್ಮಲ್ಯ, ಮನೋರಂಜನಾ ಕೇಂದ್ರ ಹಾಗೂ ಗ್ರಂಥಾಲಯಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪರಿಶೀಲಿಸಲು, ಪುನರ್ ಪರಿಶೀಲಿಸಲು ಹಾಗೂ ಪ್ರಸ್ತಾವನೆಗಳನ್ನು ಸಲ್ಲಿಸಲು ಜಿಲ್ಲಾ ಮಟ್ಟದ ಮತ್ತು ರಾಜ್ಯ ಉನ್ನತ ಮಟ್ಟದ ಸಮಿತಿಯನ್ನು ರಚಿಸತಕ್ಕದ್ದು.

(2) ಜಿಲ್ಲಾ ಮಟ್ಟದ ಸಮಿತಿಯು ಈ ಮುಂದಿನ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು ಎಂದರೆ:-

| | | |
|---|---|---|
| 1. | ಜಿಲ್ಲಾಧಿಕಾರಿ | ಪದನಿಮಿತ್ತ ಅಧ್ಯಕ್ಷ |
| 2. | ಪೊಲೀಸ್ ಆಯುಕ್ತ/ಪೊಲೀಸ್ ಉಪ ಅಧೀಕ್ಷಕ | ಪದನಿಮಿತ್ತ ಸದಸ್ಯ |
| 3. | ಉಪ ಅರಣ್ಯ ಸಂರಕ್ಷಣಾಧಿಕಾರಿ (ಸಾಮಾಜಿಕ ಅರಣ್ಯ) | ಪದನಿಮಿತ್ತ ಸದಸ್ಯ |
| 4. | ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಜಿಲ್ಲಾ ಪಂಚಾಯತ್ | ಪದನಿಮಿತ್ತ ಸದಸ್ಯ |
| 5. | ಅಧೀಕ್ಷಕ ಅಭಿಯಂತರ/ಕಾರ್ಯಪಾಲಕ ಅಭಿಯಂತರ, ಲೋಕೋಪಯೋಗಿ ಇಲಾಖೆ | ಪದನಿಮಿತ್ತ ಸದಸ್ಯ |
| 6. | ನಿರ್ದೇಶಕರು, ರಾಜ್ಯ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ | ಪದನಿಮಿತ್ತ ಸದಸ್ಯ |
| 7. | ಉಪ ವಿಭಾಗಾಧಿಕಾರಿ | ಪದನಿಮಿತ್ತ ಸದಸ್ಯ |
| 8. | ಉಪ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ | ಪದನಿಮಿತ್ತ ಸದಸ್ಯ |
| 9. | ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ | ಸದಸ್ಯ ಕಾರ್ಯದರ್ಶಿ |

(3) ಜಿಲ್ಲಾ ಮಟ್ಟದ ಸಮಿತಿಯು ಗ್ರೂಪ್-ಎ ದೇವಾಲಯಗಳ ಅಧಿಕಾರ ಕ್ಷೇತ್ರ ವ್ಯಾಪ್ತಿಯೊಳಗೆ ತಮ್ಮ ಇಲಾಖೆಗಳ ಸಂಬಂಧದಲ್ಲಿ ಕೈಗೊಳ್ಳಬೇಕಾದ ಇಪ್ಪತ್ತೈದು ಲಕ್ಷ ರೂಪಾಯಿಗಳಿಗೆ ಮೀರದ ಮೊತ್ತದ ಕಾಮಗಾರಿಗಳಿಗಾಗಿ/ದೇವಾಲಯಕ್ಕಾಗಿ ಅಗತ್ಯವಿರುವ ಪ್ರಸ್ತಾವನೆಗಳಿಗಾಗಿ ತಮ್ಮ ಪರಿಮಿತಿಯೊಳಗೆ ಬರುವ ದೇವಾಲಯಗಳಿಗಾಗಿ ಸೂಕ್ತ ಪ್ರಸ್ತಾವನೆಗಳನ್ನು ರಾಜ್ಯ ಉನ್ನತ ಮಟ್ಟದ ಸಮಿತಿಗೆ ಕಳುಹಿಸತಕ್ಕದ್ದು.

(4) ರಾಜ್ಯ ಉನ್ನತ ಮಟ್ಟದ ಸಮಿತಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು ಎಂದರೆ:-

| | | |
|---|---|---|
| 1. | ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಇಲಾಖೆಯ ಮಂತ್ರಿ | ಪದನಿಮಿತ್ತ ಅಧ್ಯಕ್ಷ |
| 2. | ಪ್ರವಾಸೋದ್ಯಮ ಮಂತ್ರಿ | ಪದನಿಮಿತ್ತ ಸದಸ್ಯ |
| 3. | ಜಿಲ್ಲಾ ಉಸ್ತುವಾರಿ ಮಂತ್ರಿ | ಪದನಿಮಿತ್ತ ಸದಸ್ಯ |

| | | |
|---|---|---|
| 4. | ಯಾರ ಮತಕ್ಷೇತ್ರದ ವ್ಯಾಪ್ತಿಯೊಳಗೆ ಭಾಗಶ: ಅಥವಾ ಸಂಪೂರ್ಣ ಗ್ರೂಪ್-ಎ ದೇವಸ್ಥಾನವು ಬರುತ್ತದೆಯೋ ಆ ದೇವಸ್ಥಾನವನ್ನು ಪ್ರತಿನಿಧಿಸುವ ಸಂಸತ್ತಿನ ಸದಸ್ಯರು ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರು | ಪದನಿಮಿತ್ತ ಸದಸ್ಯ |
| 5. | ಸರ್ಕಾರ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ (ಮುಜರಾಯಿ) ಅಥವಾ ಸರ್ಕಾರದ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಿರದ ಆತನ ಪ್ರತಿನಿಧಿ | ಪದನಿಮಿತ್ತ ಸದಸ್ಯ |
| 6. | ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಅಥವಾ ಮುಖ್ಯ ಅಭಿಯಂತರ, ಲೋಕೋಪಯೋಗಿ ಇಲಾಖೆ | ಪದನಿಮಿತ್ತ ಸದಸ್ಯ |
| 7. | ಸರ್ಕಾರದ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಥವಾ ನಿರ್ದೇಶಕ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆ | ಪದನಿಮಿತ್ತ ಸದಸ್ಯ |
| 8. | ಸರ್ಕಾರದ ಕಾರ್ಯದರ್ಶಿ, ಅರಣ್ಯ ಇಲಾಖೆ ಅಥವಾ ಸರ್ಕಾರದ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಿರದ ಆತನ ಪ್ರತಿನಿಧಿ | ಪದನಿಮಿತ್ತ ಸದಸ್ಯ |
| 9. | ಸರ್ಕಾರದ ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ ಅಥವಾ ನಿರ್ದೇಶಕ, ಪ್ರವಾಸೋದ್ಯಮ ಇಲಾಖೆ | ಪದನಿಮಿತ್ತ ಸದಸ್ಯ |
| 10. | ಸರ್ಕಾರದ ಕಾರ್ಯದರ್ಶಿ, ಇಂಧನ ಇಲಾಖೆ ಸರ್ಕಾರದ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಿರದ ಆತನ ಪ್ರತಿನಿಧಿ | ಪದನಿಮಿತ್ತ ಸದಸ್ಯ |
| 11. | ಮುಖ್ಯ ವಾಸ್ತುಶಿಲ್ಪಿ, ಲೋಕೋಪಯೋಗಿ ಇಲಾಖೆ ಅಥವಾ ಆತನ ಪ್ರತಿನಿಧಿ | ಪದನಿಮಿತ್ತ ಸದಸ್ಯ |
| 12. | ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ | ಪದನಿಮಿತ್ತ ಸದಸ್ಯ |
| 13. | ನಿರ್ದೇಶಕ, ರಾಜ್ಯ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ | ಪದನಿಮಿತ್ತ ಸದಸ್ಯ |
| 14. | ಸಂಬಂಧಪಟ್ಟ ದೇವಾಲಯದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ | ಪದನಿಮಿತ್ತ ಸದಸ್ಯ |
| 15. | ಪ್ರಾಚ್ಯವಸ್ತು ಸಮಿತಿಯ ಸದಸ್ಯ | ಪದನಿಮಿತ್ತ ಸದಸ್ಯ |
| 16. | ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿ ಇಲಾಖೆ | ಪದನಿಮಿತ್ತ ಸದಸ್ಯ ಕಾರ್ಯದರ್ಶಿ |

(5) ರಾಜ್ಯ ಉನ್ನತ ಮಟ್ಟದ ಸಮಿತಿಯು ಜಿಲ್ಲಾ ಮಟ್ಟದ ಸಮಿತಿ ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಶೀಲಿಸತಕ್ಕದ್ದು ಮತ್ತು ಅನುಮೋದಿಸತಕ್ಕದ್ದು. ಇಪ್ಪತ್ತೈದು ಲಕ್ಷ ರೂಪಾಯಿಗಳಿಗೆ ಮೀರಿರುವ ಯಾವುದೇ ಕಾಮಗಾರಿಗಳನ್ನು ರಾಜ್ಯ ಉನ್ನತ ಮಟ್ಟದ ಸಮಿತಿಯ ಅನುಮೋದನೆ ಪಡೆಯದೆ ಕೈಗೊಳ್ಳತಕ್ಕದ್ದಲ್ಲ.

(6) ಯಾವುದೇ ಅಧಿಸೂಚಿತ ಧಾರ್ಮಿಕ ಸಂಸ್ಥೆಗಳ ಪಾರಂಪರಿಕ ಮತ್ತು ಐತಿಹಾಸಿಕ ಸ್ಮಾರಕಗಳ ಅಥವಾ ಕಟ್ಟಡಗಳ ದುರಸ್ತಿ ಹಾಗೂ ಜೀರ್ಣೋದ್ಧಾರ ಕಾಮಗಾರಿಗಳನ್ನು, ವೆಚ್ಚವನ್ನು ಸಂಸ್ಥೆಗಳ ನಿಧಿಗಳಿಂದ, ಭಕ್ತಾದಿಗಳ ದೇಣಿಗೆಗಳಿಂದ ಅಥವಾ ಯಾವುದೇ ಇತರೆ ಮೂಲದಿಂದ ಭರಿಸಿದ್ದಾಗಿಯೂ, ಆಯುಕ್ತರ ಪೂರ್ವಾನುಮತಿ ಪಡೆಯದೆ ಕೈಗೊಳ್ಳತಕ್ಕದ್ದಲ್ಲ.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿ ಅಧಿನಿಯಮ, 1997 (2001ರ ಕರ್ನಾಟಕ ಅಧಿನಿಯಮ 33) ಅನ್ನು,-

(i) ಸಾಮಾನ್ಯ ಸಂಗ್ರಹಣಾ ನಿಧಿಯ ಮೊತ್ತವನ್ನು ಹೆಚ್ಚಿಸಲು;

(ii) ಅಧಿಸೂಚಿತ ಸಂಸ್ಥೆಯ ವ್ಯವಸ್ಥಾಪನಾ ಸಮಿತಿಯಲ್ಲಿ ವಿಶ್ವಕರ್ಮ ಹಿಂದೂ ದೇವಾಲಯ ವಾಸ್ತುಶಿಲ್ಪ ಮತ್ತು ಶಿಲ್ಪಶಾಸ್ತ್ರದಲ್ಲಿ ಕೌಶಲ್ಯವುಳ್ಳ ವ್ಯಕ್ತಿಯನ್ನು ಸೇರಿಸಲು;

(iii) ಗ್ರೂಪ್-ಎ ದೇವಾಲಯಗಳ ಅಧಿಕಾರ ಕ್ಷೇತ್ರ ವ್ಯಾಪ್ತಿಯೊಳಗೆ ಯಾತ್ರಾರ್ಥಿಗಳಿಗೆ ಸುರಕ್ಷತೆಯನ್ನು ಕಲ್ಪಿಸಲು ನಿರ್ಮಾಣ ಮತ್ತು ನಿರ್ವಹಣೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಪರಿಶೀಲಿಸಲು, ಪುನರ್ ಪರಿಶೀಲಿಸಲು ಮತ್ತು ಪ್ರಸ್ತಾವನೆಗಳನ್ನು ಸಲ್ಲಿಸಲು ಜಿಲ್ಲಾ ಮಟ್ಟದ ಮತ್ತು ರಾಜ್ಯ ಉನ್ನತ ಮಟ್ಟದ ಸಮಿತಿಗಳನ್ನು ರಚಿಸಲು; ಮತ್ತು

(iv) ಕೆಲವು ಇತರ ತತ್ಪರಿಣಾಮ ತಿದ್ದುಪಡಿಯನ್ನು ಮಾಡಲು,

- ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ರಾಮಲಿಂಗಾ ರೆಡ್ಡಿ**
ಸಾರಿಗೆ ಮತ್ತು ಮುಜರಾಯಿ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ

### ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997ರ (2001ರ ಕರ್ನಾಟಕ ಅಧಿನಿಯಮ 33) ಉದ್ಧೃತ ಭಾಗ

**XX XX XX**

**17. ಸಾಮಾನ್ಯ ಸಂಗ್ರಹಣ ನಿಧಿಯ ಸೃಜನೆ.-** ರಾಜ್ಯ ಧಾರ್ಮಿಕ ಪರಿಷತ್ತು, ಈ ಮುಂದಿನವುಗಳಿಂದ ಸಾಮಾನ್ಯ ಸಂಗ್ರಹಣ ನಿಧಿ ಎಂದು ಕರೆಯಲಾಗುವ ಒಂದು ನಿಧಿಯನ್ನು ಸೃಜಿಸುವುದು ಕಾನೂನು ಸಮ್ಮತವಾಗಿರತಕ್ಕದ್ದು.

(ಎ) ಅಧಿಸೂಚಿತ ಅಥವಾ ಘೋಷಿತ ಸಂಸ್ಥೆಗಳು ಈ ಮುಂದಿನ ದರದಲ್ಲಿ ನೀಡಿದ ವಂತಿಗೆಗಳು:-

(1) ಯಾವ ಸಂಸ್ಥೆಗಳ ಒಟ್ಟು ವಾರ್ಷಿಕ ಆದಾಯವು ಹತ್ತು ಲಕ್ಷ ರೂಪಾಯಿಗಳನ್ನು ಮೀರುವುದೋ ಆ ಸಂಸ್ಥೆಗಳಿಗೆ ಸಂಬಂಧಪಟ್ಟ ನಿವ್ವಳ ಆದಾಯದ ಶೇಕಡಾ ಹತ್ತರಷ್ಟು;

(2) ಯಾವ ಸಂಸ್ಥೆಗಳ ಒಟ್ಟು ವಾರ್ಷಿಕ ಆದಾಯವು ಐದು ಲಕ್ಷ ರೂಪಾಯಿಗಳನ್ನು ಮೀರಿದ್ದು, ಆದರೆ ಹತ್ತು ಲಕ್ಷ ರೂಪಾಯಿಗಳನ್ನು ಮೀರಿರುವುದಿಲ್ಲವೋ ಆ ಸಂಸ್ಥೆಗಳಿಗೆ ಸಂಬಂಧಪಟ್ಟ ನಿವ್ವಳ ಆದಾಯದ ಶೇಕಡಾ ಐದರಷ್ಟು.

(ಬಿ) ರಾಜ್ಯ ಸರ್ಕಾರದಿಂದ ಪಡೆದ ಅನುದಾನಗಳು.

**XX XX XX**

**19. ಸಾಮಾನ್ಯ ಸಂಗ್ರಹಣ ನಿಧಿಯ ನಿರ್ವಹಣೆ.-** (1) ರಾಜ್ಯ ಧಾರ್ಮಿಕ ಪರಿಷತ್ತು, ಸಾಮಾನ್ಯ ಸಂಗ್ರಹಣ ನಿಧಿಯನ್ನು ಇಲ್ಲಿ ಹೇಳಿರುವ ಷರತ್ತುಗಳಿಗೊಳಪಟ್ಟು, ಈ ಮುಂದಿನ ಉದ್ದೇಶಗಳಿಗಾಗಿ ನಿರ್ವಹಿಸತಕ್ಕದ್ದು ಎಂದರೆ.-

(ಎ) ಬಡತನದಲ್ಲಿರುವ ಅಥವಾ ಅಗತ್ಯ ಸಂದರ್ಭದಲ್ಲಿರುವ ಇತರ ಯಾವುದೇ ಧಾರ್ಮಿಕ ಸಂಸ್ಥೆಗೆ ಸಹಾಯ ನೀಡಿಕೆ;

(ಬಿ) ಹಿಂದೂ ಧರ್ಮಕ್ಕೆ ಸಂಬಂಧಿಸಿದ ಯಾವುವೇ ಧಾರ್ಮಿಕ ಉದ್ದೇಶಗಳಿಗೆ ಸಹಾಯ ನೀಡಿಕೆ;

(ಸಿ) ಸಂಸ್ಥೆಯ ಧಾರ್ಮಿಕ ಸಿದ್ಧಾಂತಗಳ ಪ್ರಚಾರ;

(ಡಿ) ವೇದಪಾಠಶಾಲೆಗಳು, ಆಗಮ ಪಾಠಶಾಲೆಗಳು ಮತ್ತು ಅರ್ಚಕರಿಗೆ ತರಬೇತಿ ನೀಡುವ ಸಲುವಾಗಿ ಹಾಗೂ ಆ ಉದ್ದೇಶಕ್ಕಾಗಿ ಪ್ರಾಚೀನ ಬರಹಗಳ ಮತ್ತು ಭಾರತೀಯ ಭಾಷೆಗಳ ಅಧ್ಯಯನ ಮಾಡುವ ಸಲುವಾಗಿ ಶಾಲೆಗಳ ಸ್ಥಾಪನೆ ಹಾಗೂ ನಿರ್ವಹಣೆ;

(ಇ) ಹಿಂದೂ ಧರ್ಮ, ತತ್ವಶಾಸ್ತ್ರ ಅಥವಾ ಶಾಸ್ತ್ರಗಳ ಅಧ್ಯಯನ ಅಥವಾ ಹಿಂದೂ ದೇವಸ್ಥಾನ ವಾಸ್ತುಶಿಲ್ಪದಲ್ಲಿ ಶಿಕ್ಷಣ ನೀಡುವ ಉದ್ದೇಶ ಹೊಂದಿರುವ ವಿಶ್ವವಿದ್ಯಾನಿಲಯ, ಕಾಲೇಜು ಅಥವಾ ಇತರ ಸಂಸ್ಥೆಯ ಸ್ಥಾಪನೆ ಮತ್ತು ನಿರ್ವಹಣೆ;

(ಎಫ್) ಹಿಂದೂ ಧರ್ಮದ ವಿಷಯದಲ್ಲಿ ಶಿಕ್ಷಣವನ್ನು ನೀಡಲಾಗುವ ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಮತ್ತು ನಿರ್ವಹಣೆ;

(ಜಿ) ದೇವಸ್ಥಾನ ಕಲೆಗಳು ಮತ್ತು ವಾಸ್ತುಶಿಲ್ಪಕ್ಕೆ ಉತ್ತೇಜನ.

(ಹೆಚ್) ಅನಾಥ ಹಿಂದೂ ಮಕ್ಕಳಿಗಾಗಿ ಅನಾಥಾಲಯಗಳ ಸ್ಥಾಪನೆ ಮತ್ತು ನಿರ್ವಹಣೆ;

(ಐ) ಸಂಸ್ಥೆಯ ಜಮೆಯಲ್ಲಿ ಸಾಕಷ್ಟು ಹಣ ಇಲ್ಲದಿರುವಾಗ ಅರ್ಚಕರಿಗೆ ಮತ್ತು ದೇವಸ್ಥಾನದ ನೌಕರರಿಗೆ ಸೇವಾಂತ ಪ್ರಯೋಜನಗಳ ಸಂದಾಯ.

(ಜೆ) ನಿರ್ಗತಿಕ, ಅಸಾಹಯಕ ಹಾಗೂ ದೈಹಿಕವಾಗಿ ಅಸಮರ್ಥರಾದ ಜನರಿಗಾಗಿ ಆಶ್ರಯ ಧಾಮಗಳ ಸ್ಥಾಪನೆ ಹಾಗೂ ನಿರ್ವಹಣೆ;

(ಕೆ) ಯಾತ್ರಿಕರ ಅನುಕೂಲಕ್ಕಾಗಿ ಆಸ್ಪತ್ರೆಗಳು ಹಾಗೂ ಔಷಧಾಲಯಗಳ ಸ್ಥಾಪನೆ ಹಾಗೂ ನಿರ್ವಹಣೆ;

(ಎಲ್) ಯಾವುದೇ ಇತರ ಹಿಂದೂ ಧಾರ್ಮಿಕ ಅಥವಾ ಧರ್ಮಾದಾಯ ಉದ್ದೇಶ;

(ಎಂ) ಹಿಂದೂ ಧಾರ್ಮಿಕ ಸಂಸ್ಥೆಗಳು ಅಥವಾ ಯಾವುದೇ ಹಿಂದೂ ಸಂಘಟನೆಯು ಗೋಶಾಲೆಗಳನ್ನು ಸ್ಥಾಪಿಸುವುದು ಮತ್ತು ಪ್ರೋತ್ಸಾಹಿಸುವುದು;

(ಎನ್) ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದು.

2) ಸಾಮಾನ್ಯ ಸಂಗ್ರಹಣ ನಿಧಿಯನ್ನು ಈ ಮುಂದಿನಂತೆ ನಿರ್ವಹಿಸತಕ್ಕದ್ದು;

i) ಯಾವೊಬ್ಬ ವ್ಯಕ್ತಿಯಿಂದ ಸ್ವೀಕರಿಸಿದ ಯಾವುದೇ ವಂತಿಗೆ ಅಥವಾ ಕೊಡುಗೆಯನ್ನು ದಾನಿಯು ನಿರ್ದಿಷ್ಟಪಡಿಸಿದ ಉದ್ದೇಶ ಯಾವುದೇ ಇದ್ದರೆ, ಅದರ ಹೊರತಾದ ಯಾವುದೇ ಉದ್ದೇಶಕ್ಕಾಗಿ ಬಳಸತಕ್ಕದ್ದಲ್ಲ.

ii) ಒಂದು ಯಾವುದೇ ಧಾರ್ಮಿಕ ಸಂಪ್ರದಾಯದ ಅಥವಾ ಅದರ ಯಾವುದೇ ಭಾಗದ ಸಂಸ್ಥೆಗೆ ನೀಡಿದ ವಂತಿಗೆಗಳು ಮತ್ತು ಕೊಡುಗೆಗಳನ್ನು ಆ ನಿರ್ದಿಷ್ಟ ವರ್ಗ, ಸಂಪ್ರದಾಯ ಅಥವಾ ಭಾಗದ ಅನುಕೂಲಕ್ಕಾಗಿ ಮಾತ್ರವೇ ಬಳಸತಕ್ಕದ್ದು.

3) xxx

**XX XX XX**

**25. ವ್ಯವಸ್ಥಾಪನಾ ಸಮಿತಿಯ ರಚನೆ.-** (1) ಒಂದು ಅಥವಾ ಹೆಚ್ಚು ಅಧಿಸೂಚಿತ ಸಂಸ್ಥೆಗಳಿಗೆ ಸಂಬಂಧಿಸಿದಂತೆ, ಅಧಿಸೂಚಿತ ಸಂಸ್ಥೆಗಳ ಒಟ್ಟು ವಾರ್ಷಿಕ ಆದಾಯವು ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಮೀರಿದ್ದಲ್ಲಿ ರಾಜ್ಯ ಧಾರ್ಮಿಕ ಪರಿಷತ್ತು, ಮತ್ತು ವಾರ್ಷಿಕ ಆದಾಯವು ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಮೀರದಿದ್ದಲ್ಲಿ ಜಿಲ್ಲಾ ಧಾರ್ಮಿಕ ಪರಿಷತ್ತು, ಭಕ್ತರ ಮತ್ತು ಹಿಂದೂ ಧಾರ್ಮಿಕ ಸಂಸ್ಥೆಗಳ ಅನುಯಾಯಿಗಳ ಹಾಗೂ ಧರ್ಮಾದಾಯ ಸಂಸ್ಥೆಗಳ ಫಲಾನುಭವಿಗಳ ಪೈಕಿಯಿಂದ ಒಂಬತ್ತು ಜನ ಸದಸ್ಯರನ್ನು ಮೀರದ ಒಂದು ವ್ಯವಸ್ಥಾಪನಾ ಸಮಿತಿಯನ್ನು ರಚಿಸತಕ್ಕದ್ದು ಮತ್ತು ಇದು ಈ ಮುಂದಿನವರನ್ನು ಎಂದರೆ:-

(i) ಒಂದು ದೇವಾಲಯದ ಸಂಬಂಧದಲ್ಲಿ ಪ್ರಧಾನ ಅರ್ಚಕ ಅಥವಾ ಅರ್ಚಕ;

(ii) ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟಿಗೆ ಸೇರಿದವರ ಪೈಕಿಯಿಂದ ಕೊನೇ ಪಕ್ಷ ಒಬ್ಬರು;

(iii) ಇಬ್ಬರು ಮಹಿಳೆಯರು;

(iv) ಸಂಸ್ಥೆಯು ಇರುವ ಸ್ಥಳದಲ್ಲಿ ವಾಸಿಸುತ್ತಿರುವ ವ್ಯಕ್ತಿಗಳ ಪೈಕಿಯಿಂದ ಕೊನೇ ಪಕ್ಷ ಒಬ್ಬರು,

- ಸದಸ್ಯರುಗಳನ್ನು ಹೊಂದಿರತಕ್ಕದ್ದು:

ಪರಂತು, ಸಂಯೋಜಿತ ಸಂಸ್ಥೆಯ ಸಂದರ್ಭದಲ್ಲಿ ಹಿಂದೂ ಮತ್ತು ಇತರೆ ಧರ್ಮಗಳೆರಡರಿಂದಲೂ ಸದಸ್ಯರನ್ನು ನೇಮಕ ಮಾಡಿಕೊಳ್ಳಬಹುದು:

ಮತ್ತು ಪರಂತು, ಅಧಿಸೂಚಿತ ಸಂಸ್ಥೆಯ ಸಂಬಂಧದಲ್ಲಿ ವ್ಯವಸ್ಥಾಪನಾ ಸಮಿತಿಯನ್ನು ಅಲ್ಲಿ ಅನುಸರಿಸುತ್ತಿರುವ ರೂಢಿ ಹಾಗೂ ಆಚರಣೆಗಳಿಗನುಸಾರವಾಗಿ ರಚಿಸತಕ್ಕದ್ದು:

ಅಲ್ಲದೆ ಪರಂತು, ಕಾನೂನುಬದ್ಧವಾಗಿ ಪದವನ್ನು ಹೊಂದಿರುವಂಥ ನಿರಸಿತ ಅಧಿನಿಯಮಗಳ ಅಡಿಯಲ್ಲಿ ರಚಿತವಾದ ಅಥವಾ ನೇಮಕವಾದ ಪ್ರತಿಯೊಂದು ವ್ಯವಸ್ಥಾಪನಾ ಸಮಿತಿ ಅಥವಾ ಪಂಚ ಸಮಿತಿ ಅಥವಾ ಧರ್ಮದರ್ಶಿ ಸಮಿತಿ ಅಥವಾ ವಂಶಪಾರಂಪರ್ಯವಲ್ಲದ ನ್ಯಾಸಧಾರಿಗಳು, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ಎರಡನೇ ತಿದ್ದುಪಡಿ) ಅಧಿನಿಯಮ, 2011 ಪ್ರಾರಂಭವಾದ ದಿನಾಂಕದಿಂದ ಅಂಥ ಪದವನ್ನು ಹೊಂದಿರುವುದು ನಿಂತುಹೋಗತಕ್ಕದ್ದು.

(2) (ಎ) ರಾಜ್ಯ ಧಾರ್ಮಿಕ ಪರಿಷತ್ತು ಮತ್ತು ಜಿಲ್ಲಾ ಧಾರ್ಮಿಕ ಪರಿಷತ್ತು, (1)ನೇ ಉಪಪ್ರಕರಣದ ಅಡಿಯಲ್ಲಿ ವ್ಯವಸ್ಥಾಪನಾ ಸಮಿತಿಯನ್ನು ರಚಿಸುವಾಗ ಸಂಸ್ಥೆ ಅಥವಾ ಅದರ ಯಾವುದೇ ಶಾಖೆಯು ಯಾವ ಧಾರ್ಮಿಕ ಸಂಪ್ರದಾಯಕ್ಕೆ ಸೇರುತ್ತದೆಯೋ ಆ ಧಾರ್ಮಿಕ ಸಂಪ್ರದಾಯಕ್ಕೆ ಸೂಕ್ತ ಮನ್ನಣೆ ನೀಡತಕ್ಕದ್ದು.

(ಬಿ) ವ್ಯವಸ್ಥಾಪನಾ ಸಮಿತಿಯ ರಚನೆಯ ವಿಧಾನ, ಸದಸ್ಯರ ಪೂರ್ವವೃತ್ತಾಂತ ಹಾಗೂ ಇತರ ವಿಷಯ ಯಾವುದಾದರೂ ಇದ್ದಲ್ಲಿ, ಅವುಗಳ ಸತ್ಯಾಪನೆಯನ್ನು, ನಿಯಮಿಸಬಹುದಾದ ಅಂಥ ರೀತಿಯಲ್ಲಿ ಮಾಡತಕ್ಕದ್ದು.

(ಸಿ)ಯಾವೊಬ್ಬ ವ್ಯಕ್ತಿಯು ಒಂದೇ ಸಮಯದಲ್ಲಿ ಒಂದಕ್ಕಿತ ಹೆಚ್ಚು ವ್ಯವಸ್ಥಾಪನಾ ಸಮಿತಿಗಳಿಗೆ ಸದಸ್ಯನಾಗುವುದಕ್ಕೆ ಅರ್ಹನಾಗಿರತಕ್ಕದ್ದಲ್ಲ.

(ಡಿ) ಯಾವುದೇ ಹಂತದಲ್ಲಿ ಯಾವುದೇ ರಾಜಕೀಯ ಪಕ್ಷದ ಪದಾಧಿಕಾರಿಯಾಗಿರುವ ಯಾವೊಬ್ಬ ವ್ಯಕ್ತಿಯು ವ್ಯವಸ್ಥಾಪನಾ ಸಮಿತಿಯ ಸದಸ್ಯನಾಗಿರತಕ್ಕದ್ದಲ್ಲ.

(3) ಯಾವೊಬ್ಬ ವ್ಯಕ್ತಿಯು,

(i) ದೇವರಲ್ಲಿ ನಂಬಿಕೆಯುಳ್ಳವನಾಗಿದ್ದ ಹೊರತು;

(ii) ಅವನು ಇಪ್ಪತ್ತೈದು ವರ್ಷ ವಯಸ್ಸಿನವನಾಗಿದ್ದ ಹೊರತು;

(iii)ಒಳ್ಳೆಯ ವರ್ತನೆ ಹಾಗೂ ಹೆಸರು ಹೊಂದಿದ್ದ ಹೊರತು ಹಾಗೂ ಸಂಸ್ಥೆಯು ಇರುವ ಪ್ರದೇಶದಲ್ಲಿ ಗೌರವಕ್ಕೆ ಪಾತ್ರನಾಗಿದ್ದ ಹೊರತು;

- ಒಂದು ಅಧಿಸೂಚಿತ ಸಂಸ್ಥೆಯ ವ್ಯವಸ್ಥಾಪನಾ ಮಂಡಲಿಯ ಸದಸ್ಯನಾಗಿ ನೇಮಕಗೊಳ್ಳಲು ಅರ್ಹನಾಗತಕ್ಕದ್ದಲ್ಲ.

(4) ಯಾವೊಬ್ಬ ವ್ಯಕ್ತಿಯು,-

(i) ಒಂದು ಸಕ್ಷಮ ನ್ಯಾಯಾಲಯದಿಂದ ಅವಿಮುಕ್ತ ದಿವಾಳಿಯೆಂದು ಘೋಷಿತನಾಗಿದ್ದರೆ, ಅಥವಾ

(ii) ಅಸ್ವಸ್ಥ ಚಿತ್ತನಾಗಿದ್ದು ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿಸಲಾಗಿದ್ದರೆ ಅಥವಾ ಕಿವುಡ ಅಥವಾ ಮೂಕನಾಗಿದ್ದರೆ ಅಥವಾ ಕುಷ್ಟ ಅಥವಾ ಇತರ ಯಾವುದೇ ಭಯಂಕರ ಅಥವಾ ಸಾಂಕ್ರಾಮಿಕ ಖಾಯಿಲೆಯಿಂದ ಪೀಡಿತನಾಗಿದ್ದರೆ, ಅಥವಾ

(iii) ಸಂಸ್ಥೆಯ ಯಾವುದೇ ಸ್ವತ್ತಿನ ಅಥವಾ ಮಾಡಿಕೊಳ್ಳಲಾದ ಯಾವುದೇ ಕರಾರಿನ ಸಂಬಂಧದಲ್ಲಿ ಈಗಿರುವ ಗುತ್ತಿಗೆಯಲ್ಲಿ ಸಂಸ್ಥೆಗಾಗಿ ಮಾಡಲಾದ ಕಾಮಗಾರಿಯಲ್ಲಿ ಪ್ರತ್ಯಕ್ಷ ಅಥವಾ ಪರೋಕ್ಷ ಹಿತಾಸಕ್ತಿ ಹೊಂದಿದ್ದರೆ ಅಥವಾ ಸಂಸ್ಥೆಗೆ ತಾನು ಕೊಡಬೇಕಾದ ಯಾವುದೇ ಪ್ರಕಾರದ ಬಾಕಿಯನ್ನು ಕೊಡದೇ ಉಳಿಸಿಕೊಂಡಿದ್ದರೆ; ಅಥವಾ

(iv) ಸಂಸ್ಥೆಯ ಪರವಾಗಿ ಅಥವಾ ವಿರುದ್ಧವಾಗಿ ಕಾನೂನು ವೃತ್ತಿಗಾರನಾಗಿ ಹಾಜರಾಗುತ್ತಿದ್ದರೆ; ಅಥವಾ

(v) ನೈತಿಕ ಅಧಃಪತನವನ್ನು ಒಳಗೊಳ್ಳುವ ಒಂದು ಅಪರಾಧಕ್ಕಾಗಿ ಕ್ರಿಮಿನಲ್ ನ್ಯಾಯಾಲಯದಿಂದ ಶಿಕ್ಷಿತನಾಗಿದ್ದು ಮತ್ತು ಅಂಥ ಶಿಕ್ಷೆಯನ್ನು ಹಿಂತೆಗೆದುಕೊಂಡಿರದಿದ್ದರೆ; ಅಥವಾ ಅಪರಾಧವನ್ನು ಕ್ಷಮಿಸಿರದಿದ್ದರೆ, ಅಥವಾ

(vi) ಯಾವಾಗಲಾದರೂ ಸಂಸ್ಥೆಯ ಹಿತಾಸಕ್ತಿಗೆ ವಿರುದ್ಧವಾಗಿ ವರ್ತಿಸಿದ್ದರೆ; ಅಥವಾ

(vii) ಅಂಥ ಸಂಸ್ಥೆಯ ಅರ್ಚಕನಾಗಿ ಅಲ್ಲದೆ ಯಾವುದೇ ಪದವನ್ನು ಧಾರಣ ಮಾಡಿದ್ದರೆ ಅಥವಾ ಒಬ್ಬ ನೌಕರನಾಗಿದ್ದರೆ ಅಥವಾ ಅಂಥ ಸಂಸ್ಥೆಯಿಂದ ಯಾವುದೇ ಉಪಲಬ್ಧಿಗಳನ್ನು ಅಥವಾ ಆನುಷಂಗಿಕ ಲಾಭವನ್ನು ಸ್ವೀಕರಿಸುವ ವ್ಯಕ್ತಿಯಾಗಿದ್ದರೆ; ಅಥವಾ

(viii) ಮದ್ಯಪಾನ ಅಥವಾ ಮಾದಕದ್ರವ್ಯ ಸೇವನೆಯ ದುರ್ವ್ಯಸನಿಯಾಗಿದ್ದರೆ; ಅಥವಾ

(ix) ಹಿಂದೂ ಅಲ್ಲದಿದ್ದರೆ; ಅಥವಾ ಹಿಂದೂ ಆಗಿದ್ದು ತರುವಾಯದಲ್ಲಿ ಯಾವುದೇ ಇತರ ಧರ್ಮಕ್ಕೆ ಪರಿವರ್ತಿತನಾಗಿದ್ದರೆ,

-ಅವನು ಯಾವುದೇ ಅಧಿಸೂಚಿತ ಸಂಸ್ಥೆಯ ವ್ಯವಸ್ಥಾಪನಾ ಸಮಿತಿಯ ಸದಸ್ಯನಾಗಿ ನೇಮಕಗೊಳ್ಳಲು ಅಥವಾ ಮುಂದುವರಿಯಲು ಅನರ್ಹನಾಗಿರತಕ್ಕದ್ದು.

(5) ವ್ಯವಸ್ಥಾಪನಾ ಸಮಿತಿಯ ಒಬ್ಬ ಸದಸ್ಯನು (4)ನೇ ಉಪಪ್ರಕರಣದ ಅಡಿಯಲ್ಲಿ ಯಾವುದೇ ಅನರ್ಹತೆಗೆ ಒಳಗಾದರೆ ಅಥವಾ ಅನರ್ಹನಾದರೆ ಅವನು ಅಂಥ ಸದಸ್ಯನಾಗಿರುವುದು ಸಹಜವಾಗಿಯೇ ನಿಂತು ಹೋಗತಕ್ಕದ್ದು.

(6) ಯಾವೊಬ್ಬ ಸದಸ್ಯನು (4)ನೇ ಉಪಪ್ರಕರಣದ ಅಡಿಯಲ್ಲಿ ಯಾವುದೇ ಅನರ್ಹತೆಗೆ ಒಳಗಾದ ಬಗ್ಗೆ ಅಥವಾ ಅನರ್ಹನಾದ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಸಂಬAಧಪಟ್ಟ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಅವಕಾಶಕೊಟ್ಟ ತರುವಾಯ ಧಾರ್ಮಿಕ ಪರಿಷತ್ತು ತಾನಾಗಿಯೇ ಆಗಲಿ ಅಥವಾ ತನಗೆ ಬಂದ ವರದಿಯ ಮೇಲಾಗಲಿ ಆ ಪ್ರಶ್ನೆಯನ್ನು ತೀರ್ಮಾನಿಸಬಹುದು.

**XX XX XX**

**26. ವ್ಯವಸ್ಥಾಪನಾ ಸಮಿತಿಯ ಪದಾವಧಿ ಹಾಗೂ ಅಧ್ಯಕ್ಷನ ಚುನಾವಣೆ.-** (1) ರಾಜ್ಯ ಧಾರ್ಮಿಕ ಪರಿಷತ್ತಿನ ಅಥವಾ ಸಂದರ್ಭಾನುಸಾರ ಜಿಲ್ಲಾ ಧಾರ್ಮಿಕ ಪರಿಷತ್ತಿನ ಇಚ್ಛೆಗೆ ಒಳಪಟ್ಟು ಸದಸ್ಯರು, ಮೂರು ವರ್ಷಗಳ ಅವಧಿಯವರೆಗೆ ಆ ಅವಧಿಯಲ್ಲಿ ಸಮಿತಿಯು ವಿಘಟಿತವಾಗದಿದ್ದರೆ ಅಥವಾ ಕಾರ್ಯನಿರ್ವಹಿಸುವುದು ನಿಂತು ಹೋಗದಿದ್ದರೆ, ಪದಧಾರಣ ಮಾಡತಕ್ಕದ್ದು.

2) 25ನೇ ಪ್ರಕರಣದ ಅಡಿಯಲ್ಲಿ ವ್ಯವಸ್ಥಾಪನಾ ಸಮಿತಿಯು ರಚಿತವಾಗಿದ್ದಲ್ಲಿ, ನಿಯಮಿಸಲಾದ ಪ್ರಾಧಿಕಾರವು ಸದಸ್ಯರ ಪೈಕಿಯಿಂದ ಒಬ್ಬನನ್ನು ಅಧ್ಯಕ್ಷನನ್ನಾಗಿ ಚುನಾಯಿಸತಕ್ಕದ್ದು.

3) ರಾಜ್ಯ ಸರ್ಕಾರವು, ಅಥವಾ ನಿಯಮಿಸಲಾದ ಪ್ರಾಧಿಕಾರವು ಕಾರ್ಯನಿರ್ವಹಣಾಧಿಕಾರಿಯನ್ನು ಯಾವುದೇ ಅಧಿಸೂಚಿತ ಸಂಸ್ಥೆ ಅಥವಾ ಸಂಸ್ಥೆಗಳ ಸಂಬಂಧದಲ್ಲಿ ವ್ಯವಸ್ಥಾಪನಾ ಸಮಿತಿಗೆ ಸಂಬಂಧಿಸಿದಂತೆ ಮತದಾನದ ಹಕ್ಕು ಹೊಂದಿರದ ಪದನಿಮಿತ್ತ ಸದಸ್ಯ ಕಾರ್ಯದರ್ಶಿಯನ್ನಾಗಿ ನಾಮನಿರ್ದೇಶಿಸಬಹುದು.

4) ಒಬ್ಬನಿಗಿಂತ ಹೆಚ್ಚು ವಂಶಪಾರಂಪರ್ಯ ನ್ಯಾಸಧಾರಿಯಿಂದ ಅಥವಾ ಸಂಸ್ಥಾಪಕ ನ್ಯಾಸಧಾರಿಯಿಂದ ನಿರ್ವಹಿಸಲಾಗುತ್ತಿರುವ ಅಧಿಸೂಚಿತ ಸಂಸ್ಥೆಗಳ ಸಂದರ್ಭದಲ್ಲಿ, ನಿಯಮಿಸಬಹುದಾದಂಥ ಪ್ರಕ್ರಿಯೆಗೆ ಅನುಸಾರವಾಗಿ ಅಧ್ಯಕ್ಷನನ್ನು ಚುನಾಯಿಸತಕ್ಕದ್ದು.

**XX XX XX**

**69ಡಿ. ವಾಸ್ತುಶಿಲ್ಪ ಸಮಿತಿಯ ರಚನೆ.-** (1) ರಾಜ್ಯ ಸರ್ಕಾರವು, ರಾಜ್ಯಕ್ಕಾಗಿ, ಈ ಮುಂದಿನ ಸದಸ್ಯರನ್ನು ಒಳಗೊಂಡಿರುವ ವಾಸ್ತುಶಿಲ್ಪ ಸಮಿತಿ ಎಂದು ಕರೆಯಲಾಗುವ ಒಂದು ಸಮಿತಿಯನ್ನು ರಚಿಸತಕ್ಕದ್ದು, ಎಂದರೆ:-

(i) ಸರ್ಕಾರವು ನೇಮಕ ಮಾಡಿದ ಇಲಾಖೆಯ ಸೂಪರಿಂಟೆಂಡಿಂಗ್ ಇಂಜಿನಿಯರ್ ವಾಸ್ತುಶಿಲ್ಪ ಸಮಿತಿಯ ಪದನಿಮಿತ್ತ ಅಧ್ಯಕ್ಷನಾಗಿರತಕ್ಕದ್ದು.

(ii) ಶಿಲ್ಪಕಲಾ ಪರಿಷತ್ತಿನ ಅಧ್ಯಕ್ಷರು - ಸದಸ್ಯರು

(iii) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಒಬ್ಬ ಸ್ಥಪತಿ - ಸದಸ್ಯರು

(iv) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಒಬ್ಬ ಆಗಮ ತಜ್ಞ - ಸದಸ್ಯರು

(v) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಒಬ್ಬ ವಾಸ್ತು ತಜ್ಞ - ಸದಸ್ಯರು

(2) ಅಧ್ಯಕ್ಷರನ್ನು ಹೊರತುಪಡಿಸಿ ವಾಸ್ತುಶಿಲ್ಪ ಸಮಿತಿಯ ಸದಸ್ಯರ ಪದಾವಧಿಯು ಮೂರು ವರ್ಷಗಳಾಗಿರತಕ್ಕದ್ದು.

(3) ವಾಸ್ತುಶಿಲ್ಪ ಸಮಿತಿಯ ಸದಸ್ಯರ ವಯಸ್ಸು, ಅರ್ಹತೆ ಹಾಗೂ ಅದರ ಅಧಿಕಾರಗಳು ಮತ್ತು ಪ್ರಕಾರ್ಯಗಳು ನಿಯಮಿಸಬಹುದಾದಂಥವುಗಳು ಆಗಿರತಕ್ಕದ್ದು.

**XX XX XX**

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಪ್ರಿ7, ಕಾಸೂ , ಪ್ರತಿಗಳು 500, 19ನೇ ಫೆಬ್ರವರಿ 2023

**KARNATAKA LEGISLATIVE ASSEMBLY**
**SIXTEENTH LEGISLATIVE ASSEMBLY**
**THIRD SESSION**

# THE KARNATAKA HINDU RELIGIOUS INSTITUTIONS AND CHARITABLE ENDOWMENTS (AMENDMENT) BILL, 2024
## (LA Bill No. 11 of 2024)

A Bill further to amend the Karnataka Hindu Religious Institutions and Charitable Endowments Act, 1997.

Whereas it is expedient further to amend the Karnataka Hindu Religious Institutions and Charitable Endowments Act, 1997 (Karnataka Act 33 of 2001) for the purposes hereinafter appearing;

Be it enacted by the Karnataka State Legislature in the Seventy fifth year of the Republic of India, as follows:-

**1. Short title and commencement.-** (1) This Act may be called the Karnataka Hindu Religious Institutions and Charitable Endowments (Amendment) Act, 2024.

(2) It shall come into force at once.

**2 Amendment of section 17:-** In the Karnataka Hindu Religious Institutions and Charitable Endowments Act, 1997 (Karnataka Act 33 of 2001) (hereinafter referred to as the Principal Act), in section 17, in clause (a),-

(i)for sub-clause (1) and the entries relating thereto the following shall be substituted, namely:-

"(1) ten percent of the gross income in respect of institutions whose gross annual income exceeds rupees one crore;"

(ii) for sub-clause (2) and the entries relating thereto the following shall be substituted, namely:-

"(2) five percent of the gross income in respect of institutions whose gross annual income exceeds rupees ten lakhs but does not exceed rupees one crore."

**3. Amendment of section 19:-** In section 19 of the Principal Act, in sub-section (1), for clause (a), the following shall be substituted, namely:-

"(a) the grant in aid to religious institution of notified category-C only which is less income or in needy circumstances".

**4. Amendment of section 25:-** In section 25 of the Principal Act, in sub-section (1),-

(i) in clause (iv), after the third proviso, the following shall be inserted, namely:-

"Provided also that, one of the remaining four general members shall be skilled in Vishwakarma hindu temple architecture and sculpture."

**5. Amendment of section 26:-** In section 26 of the Principal Act, for sub-section (2), the following shall be substituted namely,-

"(2) The Rajya Dharmika Parishat shall have the power to appoint Chairman of the Committee of Management."

**6. Insertion of new section 69E.-** After section 69D of the Principal Act, the following shall be inserted, namely:-

**"69E. Constitution of District level and State High level Committee.-** (1) The State Government shall constitute a district level and State High level Committee to scrutinize, review and submit the proposals regarding construction and maintenance of buildings, roads and tunnels, electricity supply and maintenance, water supply and sanitation, construction of recreation centre and libraries to provide necessary facilities to pilgrims and to provide safety to pilgrims within the jurisdiction of Group "A" Temple.

(2) The District level committee shall consist of the following members, namely:-

| | | |
|---|---|---|
| 1. | The Deputy Commissioner | Ex-officio Chairman |
| 2. | The Commissioner of Police/Deputy superintendent of Police | Ex-officio Members |
| 3. | The Deputy Conservator of Forest (Social forest) | Ex-officio Member |
| 4. | The Chief Executive Officer, Zilla Panchayat | Ex-officio Member |
| 5. | The Superintendent Engineer/ Executive Engineer of the Public Works Department | Ex-officio Member |
| 6. | The Director, State Archeological Department | Ex-officio Member |
| 7. | The Assistant Commissioner | Ex-officio Member |
| 8. | The Deputy Director, Tourism Department | Ex-officio Member |
| 9. | The Executive officer of the Temple | Member Secretary |

(3) The District Level Committee shall submit suitable proposals for Temple coming within their limits to the State High Level Committee for the works/proposals require for Temple of an amount exceeding Rupees twenty five lakhs to be undertaken in respect of their departments within the jurisdiction of the Group "A" Temples.

(4) The State High level committee shall consist of the following members, namely:-

| | | |
|---|---|---|
| 1. | The Minister in charge of Hindu Religious Institutions and Charitable Endowment Department | Ex-officio Chairman |
| 2. | The Minister in charge of Tourism | Ex-officio Member |
| 3. | The Minister in charge of District | Ex-officio Member |
| 4. | the Members of Parliament and the Members of the State Legislature representing a part or whole of Group "A" Temple whose electoral constituencies lie within the limits of it | Ex-officio Member |
| 5. | The Principal Secretary to Government, Revenue Department (Muzrai) or his representative not below the rank of the Deputy Secretary to Government | Ex-officio Member |

| | | |
|---|---|---|
| 6. | The Secretary to Government Public Works Department or the Chief Engineer, Public Works Department | Ex-officio Member |
| 7. | The Secretary to Government Rural Development and Panchayat Raj Department or the Director Rural Development and Panchayat Raj Department | Ex-officio Member |
| 8. | The Secretary, Forest Department or his representative not below the rank of the Deputy Secretary to Government | Ex-officio Member |
| 9. | The Secretary Tourism Department or the Director of Tourism Department | Ex-officio Member |
| 10. | The Secretary, Energy Department or his representative not below the rank of the Deputy Secretary to Government | Ex-officio Member |
| 11. | The Chief Architect, Public Works Department or his representative | Ex-officio Member |
| 12. | The Managing Director Karnataka Urban Water Supply and Sewerage Board | Ex-officio Member |
| 13. | The Director, State Archaeological Research Department | Ex-officio Member |
| 14. | The Chairman of the Management Committee of concerned Temple | Ex-officio Member |
| 15. | Member of Architectural committee | Ex-officio Member |
| 16. | The Commissioner, Hindu Religious Institutions and Charitable Endowment Department | Ex-officio Member Secretary |

(5) The proposal submitted by the District Level Committee shall be scrutinized and approved by the State High Level Committee. Any works exceeding Rupees twenty five lakhs cannot be taken up without the approval of the State High Level Committee.

(6) Repairs and renovation works of heritage and historical monuments or buildings of any notified religious institutions shall not be carried out without prior permission of the Commissioner, though the expenditure is met out of the funds of the institutions, donations by the devotees or from any other source.”

## STATEMENT OF OBJECTS AND REASONS

It is considered necessary further to amend the Karnataka Hindu Religious Institutions and Charitable Endowment Act, 1997 (Karnataka Act 33 of 2001) to,-

(i) enhance the amount of common pool fund;

(ii) include a person skilled in Vishwa Hindu Temple architecture and sculpture in the committee of management of notified institution;

(iii) create District Level and State High Level committees to scrutinize, review and submit the proposals regarding construction and maintenance etc., and to provide safety to pilgrims within the jurisdiction of Group 'A' temple; and

(iv) certain other consequential amendment are made.

Hence, the Bill.

**FINANCIAL MEMORANDUM**

There is no extra expenditure involved in the proposed Legislative measure.

**RAMALINGA REDDY**
Minister for Transport and Muzrai

**M.K. VISHALAKSHI**
Secretary
Karnataka Legislative Assembly

**ANNEXURE**

**EXTRACT FROM THE KARNATAKA HINDU RELIGIOUS INSTITUTIONS AND CHARITABLE ENDOWMENT ACT, 1997 (KARNATAKA ACT 33 OF 2001)**

**XXX XXX XXX**

**17. Creation of Common Pool Fund.-** It shall be lawful for the Rajya Dharmika Parishat to create a fund to be called the Common Pool Fund out of.-

(a) contributions made by the notified or declared institutions at the following rate:-

(1) ten percent of the net income in respect of institutions whose gross annual income exceeds rupees ten lakhs;

(2) five percent of the net income in respect of institutions whose gross annual income exceed rupees five lakhs but does not exceed rupees ten lakhs.

(b) Grants received from the State Government.

**XXX XXX XXX**

**19. Administration of Common Pool Fund.-** (1) The Rajya Dharmika Parishat shall administer the Common Pool Fund subject to the conditions herein stated and for the following purposes, namely:-

(a) the grant of aid to any other religious institution which is poor or in needy circumstances;

(b) the grant of aid to any religious purposes connected with the Hindu Religion;

(c) the propogation of the religious tenets of the institution;

(d) the establishment and maintenance of Veda Patashalas, Agama Patashalas and schools for training the archakas, and for the study of ancient scripts and indian languages for that purpose;

(e) the establishment and maintenance of a university or college or other institution having for its object the study of Hindu Religion, philosophy or sastras or for imparting instructions in Hindu temple architecture;

(f) the establishment and maintenance of educational institutions where instructions in the Hindu religion is also provided;

(g) promotion of temple arts and architurecture;

(h) the establishment and maintenance of orphanages for Hindu childern;

(i) payment of terminal benefits to the Archaks and temple servants where there is no sufficient fund at the credit of the institution;

(j) the establishment and maintenance of poor homes for destitute, helpless and physically disabled persons;

(k) the establishment and maintenance of Hospitals and Dispenceries for providing facilities to philigrims;

(l) any other charitable or Hindu Religious purpose;

(m) for establishment and promotion of goshalas by Hindu Relgious Institutions or any Hindu Organisation;

(n) to meet the objects of the Act.

(2) The Common Pool Fund shall be so administered that:-

(i) no contribution or donation received from any person shall be utilised for any purpose other than the purpose specified if any by the donor.

(ii) contribution and donation made to institution, or institution of any relegious denomination or any section thereof shall be utilised for the benefit of that particular class or denomination or section only.

(3) xxx

**XXX XXX XXX**

**25. Constitution of the Committee of Management.-** (1) There shall be constituted, in respect of one or more notified institutions by the Rajya Dharmika Parishat,

if the gross annual income of the notified institutions exceeds rupees twenty five lakhs and the Zilla Dharmika Parishat if the annual income does not exceed rupees twenty five lakhs, a committee of Management consisting of not more than nine members from among the devotees and followers of Hindu Religious Institutions and beneficiaries of the charitable institutions and it shall consist of,-

(i) in the case of a temple the Pradhan Archak or Archak;
(ii) at least one among the Scheduled Castes or Scheduled Tribes;
(iii) two women;
(iv) at least one from among the persons living in the locality where the institution situated:

Provided that, in case of composite institution members from both Hindu and other religion may be appointed:

Provided further that, the Committee of Management in respect of notified institution be constituted according to the usage and practice prevailing therein:

Provided also that, every committee of Management or Pancha Committee or Dharmadarshi Committee or non hereditary trustees constituted or appointed under the repealed Acts who were lawfully holding office shall cease to hold such office from the date of commencement of the Karnataka Hindu Religious and Charitable Endowment (Second Amendment) Act, 2011.

(2) (a) The Rajya Dharmika Parishat and Zilla Dharmika Parishat, while constituting the Committee of Management under sub-section (1), shall have due regard to the religious denomination to which the institution or any section thereof belongs.
(b) The procedure for the constitution of Committee of Management, verification of antecedents and other matter if any, of the member shall be done in such manner as may be prescribed;
(c) No person shall be eligible to become a member in more than one Committee of Management at a time; (d) No person, who is an office bearer of any political party at any level, shall become a member of the Committee of Management.

(3) No person shall be qualified for being appointed as member of the Committee of Management of a notified institution unless,-

(i) he has faith in God;
(ii) he has attained the age of twenty five years;
(iii) he possesses good conduct and reputation and commands respect in the locality in which the institution is situated.

(4) A person shall be disqualified for being appointed or continuing as a member of the Committee of Management of any notified institution,-

(i) if he is declared as an undischarged insolvent by a competent court; or
(ii) if he is of unsound mind and stands so declared by a competent court of law or if he is a deaf or mute or is suffering from virulent form of leprosy or contagious disease; or
(iii) if he has an interest direct or indirect in any subsisting lease of any property or of any contract made with, or is in arrears of any kind due by him to such institution; or
(iv) if he is appearing as a legal practitioner for or against the institution; or
(v) if he has been sentenced by a criminal court for an offence involving moral turpitude; such sentence not having been reversed or offence pardoned; or
(vi) if he has at any time acted adverse to the interest of the institution; or (vii) if he is an office holder other than Archaka or a servant attached to or a person in receipt of any emolument or perquisite from such institution; or
(viii) if he is addicted to intoxication, liquor or drugs; or
(ix) if he is not a Hindu, or having been a Hindu has converted to any other religion.

(5) If a member of the committee of management is or becomes subject to any disqualification under sub-section (4), he shall automatically cease to be such member.

(6) If any question arises whether a member is or has become subject to any disqualification under sub-section (4), the Dharmika Parishat may either suo-moto or on a report made to it and after giving an opportunity, of being heard to the person concerned decide the question.

**XXX XXX XXX**

**26. Term of Office of the Committee of Management and Election of Chairman.-** (1) Subject to the pleasure of the Rajya Dharmika Parishat or Zilla Dharmika Parishat as the case may be, members shall hold office for a term of three years unless in the meanwhile the Committee is dissolved or has ceased to function.

(2) Where the Committee of management is constituted under section 25, the members shall at the first meeting of the Committee, elect a Chairman from among themselves.

(3) The State Government or the prescribed authority may nominate the Executive Officer as Ex-officio Secretary of the Committee of Management in respect of any notified institution or institutions, without voting rights.

(4) in case of notified institutions managed by more than one hereditary trustee or founder trustee, the chairman shall be elected in accordance with such procedure as may be prescribed.

**69D. Constitution of Architectural Committee.-** (1) The State Government may constitute for the state, a committee called Architectural committee consisting of the following members, namely:-

(i) An officer of the rank of the Superintending Engineer of the Department of Architecture appointed by the Government shall be the Ex-officio Chairman

(ii) The Chairman of the Shilpakala Parishat Member

(iii) One Stapathi nominated by the State Government Member

(iv) One Agama expert nominated by the State Government Member

(v) One Vaastu expert nominated by the State Government Member

(2) The term of the members other than the Chairman of the Architectural Committee shall be three years.

(3) The age, qualification of the members and the powers and functions of the Architectural Committee shall be such as may be prescribed.

**XXX XXX XXX**

Govt. Press, Vikasa Soudha, Bengaluru, 19th Feb, 2024, P7, W.D. , Copies 500